ಹೇಳಿಕೊಳ್ಳುತ್ತಿದ್ದ. ಇಂತಹ ಹೊತ್ತಿನಲ್ಲಿ ಅನುಕಂಪದ ಸಂದೇಶಗಳು ಅವನಿಗೆ ಬೇಡವಾಗಿದ್ದವು. ಮೊದಲಿನ ಪ್ರೇಮದ ಸಂದೇಶಗಳೇ ಹೆಚ್ಚಿನ ಮುದ ಕೊಡುತ್ತಿದ್ದವು ಎಂದು ಅವನಿಗನ್ನಿಸಲಾರಂಭಿಸಿತು. ಆಕೆಯ ಕಾರುಣ್ಯಪ್ರವಾಹವನ್ನು ನಿಲ್ಲಿಸುವುದು ಹೇಗೆ ಎಂದು ಚಿಂತಿಸಲಾರಂಭಿಸಿದ.

ಕೊನೆಗೂ ಮೋಹನಸ್ವಾಮಿ ಆಕೆಗೆ ಪ್ರಪ್ರಥಮ ಮೊಬೈಲ್ ಸಂದೇಶವನ್ನು ಕಳುಹಿಸಿದ. "ನಿನ್ನ ಗಂಡ ಉನ್ನಿ ಮುದ್ದುಮುದ್ದಾಗಿದಾನೆ – ಹಾಟ್ ಅಂಡ್ ಕ್ಯೂಟ್! ಒಮ್ಮೆ ಮುಟ್ಟಬೇಕು ಅನ್ನಿಸುತ್ತೆ" ಎಂದು ರವಾನಿಸಿದ. ಆ ಸಂದೇಶ ಪೂರ್ತಿ ಸುಳ್ಳೇನೂ ಆಗಿರಲಿಲ್ಲ. ಉನ್ನಿಕೃಷ್ಣನ್ ನೋಡಲು ಸೊಗಸಾಗಿದ್ದ. ಆ ದಿನ ಈಕೆ ಹನಿಗಣ್ಣಾಗಿ ತನ್ನನ್ನು ಅಪ್ಪಿಕೊಂಡಾಗ, ಮೋಹನಸ್ವಾಮಿ ಎವೆಯಿಕ್ಕದೆ ಉನ್ನಿಕೃಷ್ಣನ್‌ನನ್ನು ನೋಡಿದ್ದ. ಮಗುವನ್ನು ಎತ್ತಿಕೊಂಡಿದ್ದ ಉನ್ನಿ ಸೊಗಸಾಗಿ ಕಂಡಿದ್ದ. ಯಾವುದೇ ಸಂಕೋಚವಿಲ್ಲದೆ ಸಾರಾ ಅವನ ಪ್ಯಾಂಟಿನ ಜೇಬಿಗೆ ಕೈ ತೂರಿಸಿ ಪರ್ಸನ್ನು ತೆಗೆದಾಗ ಮೈ ಬಿಸಿ ಮಾಡಿಕೊಂಡಿದ್ದ. ಅವನೂ ತನ್ನನ್ನು ಅಪ್ಪಿಕೊಳ್ಳುವನೇನೂ ಎಂದು ಆಸೆ ಪಟ್ಟಿದ್ದ. ಹಾಗೇನೂ ಆಗಿರಲಿಲ್ಲ.

ತಕ್ಷಣ ಆಕೆಯಿಂದ ಪ್ರತಿಕ್ರಿಯೆ ಬಂತು. ಸಂದೇಶದ ಮೊದಲಿಗೆ ಮತ್ತು ಕೊನೆಯಲ್ಲಿ ಮೂರು ಮೂರು ಸಿಟ್ಟಿನ ಎಮೋಜಿಗಳನ್ನು ಹಾಕಿದ್ದಳು. "ಧೈರ್ಯವಿದ್ದರೆ ಅವನನ್ನು ಮುಟ್ಟೋದಕ್ಕೆ ಪ್ರಯತ್ನ ಪಡು. ನಿನ್ನ ಅಷ್ಟೂ ಕೈಬೆರಳುಗಳನ್ನು ಕತ್ತರಿಸಿ ಬಿಡ್ತೀನಿ!" ಎಂದು ಬೈದು ಬರೆದಿದ್ದಳು. ಆ ಸಂದೇಶವನ್ನು ಓದಿ ಮೋಹನಸ್ವಾಮಿ ಮನಸಾರೆ ನಕ್ಕುಬಿಟ್ಟ.

ಮತ್ತೆಂದೂ ಆಕೆಯಿಂದ ಸಂದೇಶಗಳು ಬರಲಿಲ್ಲ. ಕೊನೆಗೂ ಸಮಾನತೆಯನ್ನು ಸಾಧಿಸಿದ ಖುಷಿಯಲ್ಲಿ ಮೋಹನಸ್ವಾಮಿ ಮುದಗೊಂಡ.

## ವಸುಧೇಂದ್ರ

ಸಣ್ಣಕತೆಗಾರ, ಪ್ರಬಂಧಕಾರ, ಅನುವಾದಕ ವಸುಧೇಂದ್ರ 'ಛಂದ ಪುಸ್ತಕ' ಎಂಬ ಪ್ರಕಾಶನ ಸಂಸ್ಥೆಯನ್ನು ನಡೆಸುತ್ತಿದ್ದಾರೆ. ಬಳ್ಳಾರಿಯ ಸಂಡೂರಿನವರು. ತಾವು ಮಾಡುತ್ತಿದ್ದ ಸಾಫ್ಟ್‌ವೇರ್ ಕೆಲಸಕ್ಕೆ ವಿದಾಯ ಹೇಳಿ ಪುಸ್ತಕ ಪ್ರಕಟಣೆ, ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕತೆ, ಪ್ರಬಂಧ, ಅನುವಾದಗಳ ಮಹತ್ವದ ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.